ಪಿಸಿ ನಂ.1/2018
CW-1

ದಿನಾಂಕಃ 02.02.2018 ರಂದು ಪಿರ್ಯಾದುದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ನಂತರ ಪಿರ್ಯಾದುದಾರರು ಅವರ ಸ್ವ-ಪ್ರಮಾಣ ಪೂರ್ವಕ ಹೇಳಿಕೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದನ್ನು ಅವರ ಸ್ವ-ಪ್ರಮಾಣ ಪೂರ್ವಕ ಹೇಳಿಕೆಯ ಎಂದು ಪರಿಗಣಿಸಿ ಅವರನ್ನು ಸಿಡಬ್ಲೂಃ 1 ಎಂದು ಪರಿಗಣಿಸಲು ಕೋರಿದ್ದರಿಂದ ಕೋರಿಕೆಯನ್ನು ಮನ್ನಿಸಲಾಯಿತು. ಹಾಗೂ ಅವರನ್ನು ಸಿಡಬ್ಲೂ 1 ಎಂದು ಪರಿಗಣಿಸಲಾಯಿತು.

ಮುಂದುವರಿದ ಸ್ವ ಪ್ರಮಾಣ ಪೂರ್ವಕ ಹೇಳಿಕೆ ಸ್ವತಃ ಪಿರ್ಯಾದಿಯಿಂದ

1) ನಾನು ನನ್ನ ಸ್ವ-ಪ್ರಮಾಣ ಪೂರ್ವಕ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

2) ನನಗೆ ಈ ಪ್ರಕರಣವನ್ನು ನಡೆಸಲು ಅಧಿಕಾರ ನೀಡಿದ ಬಗ್ಗೆ ಠರಾವು ಪ್ರತಿಯನ್ನು ಹಾಗೂ ಆರೋಪಿಯು ನನಗೆ ದಿನಾಂಕಃ 09.11.2017 ರ ಸ್ಟೇಟ್ ಬ್ಯಾಂಕ್ ಇಂಡಿಯಾ, ಕಾಕನೂರು ಶಾಖೆಯ ಮೂಲ ಚೆಕ್ಕನ್ನು ದಿನಾಂಕಃ 09.11.2017 ರಂದು ನಮ್ಮ ಖಾತೆಯುಳ್ಳ ಸ್ಟೇಟ್ ಬ್ಯಾಂಕ್ ಇಂಡಿಯಾ, ಬದಾಮಿ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದ ಬಗ್ಗೆ ಒಂದು ಕೌಂಟರ ಫೈಲ್ ಹಾಗೂ ಸ್ಟೇಟ್ ಬ್ಯಾಂಕ್ ಇಂಡಿಯಾ, ಬದಾಮಿ ಶಾಖೆಯವರು ದಿನಾಂಕ 23.11.2017 ರಂದು ನನಗೆ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ನೀಡಿದ ಹಿಂಬರಹವನ್ನು, ಅದೇ ರೀತಿ ದಿನಾಂಕಃ 27.11.2017 ರಂದು ನಮ್ಮ ವಕೀಲರು ಆರೋಪಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು, ಆರೋಪಿಗೆ ನೋಟಿಸು ಕಳುಹಿಸಿಕೊಟ್ಟ ಬಗ್ಗೆ ಒಂದು ಅಂಚೆ ರಸೀದಿಯನ್ನು ಹಾಗೂ ಆರೋಪಿಗೆ ನೋಟಿಸು ಮುಟ್ಟಿರುವ ಬಗ್ಗೆ ಒಂದು ಅಂಚೆ ಸ್ವಿಕೃತಿ ಪತ್ರವನ್ನು ನನ್ನ ಪಿರ್ಯಾದಿಯೊಂದಿಗೆ ಹಾಜರು ಪಡಿಸಿರುತ್ತೇನೆ.

3) ಆದುದರಿಂದ ಆರೋಪಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಹಾಗೂ ಪಿರ್ಯಾದಿಯಲ್ಲಿ ಕೇಳಿರುವಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಪಿಸಿ ನಂ.1/2018
CW-1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಅವರು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎ ಒ.

**sd/-**

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಬದಾಮಿ.